ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್

1347(862); ಡಾ॥ ಶಿವರಾಜ್ ಪಾಟೀಲ್ ಎಸ್.

ಅ) ರಾಜ್ಯದಲ್ಲಿರುವ ಎಂಎಸ್ಐಎಲ್ ಲಿಕ್ಕರ್ ಶಾಪ್‌ಗಳ ಸಂಖ್ಯೆ ಎಷ್ಟು; ಲಿಕ್ಕರ್ ಶಾಪ್ ತೆರೆಯಲು ಸರ್ಕಾರ ನೀಡಿರುವ ಸೌಲಭ್ಯಗಳೇನು; (ಲಿಕ್ಕರ್ ಶಾಪ್‌ವಾರು ವಿವರ ನೀಡುವುದು)

ಆ) ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್ ಇಲ್ಲದ ತಾಲ್ಲೂಕು ಅಥವಾ ಪಟ್ಟಣ ಪ್ರದೇಶಗಳಲ್ಲಿ ಹೊಸದಾಗಿ ಲಿಕ್ಕರ್ ಶಾಪ್‌ಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)

ಇ) ರಾಯಚೂರು ಜಿಲ್ಲೆಯಲ್ಲಿರುವ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್‌ಗಳು ಎಷ್ಟಿವೆ;

ಪ್ರತಿ ಲಿಕ್ಕರ್ ಶಾಪ್‌ನಿಂದ ಸರ್ಕಾರಕ್ಕೆ ಪ್ರತಿ ವರ್ಷ ಸಂದಾಯವಾಗುತ್ತಿರುವ ಆದಾಯ ಎಷ್ಟು;

ಈ) ರಾಯಚೂರು ಜಿಲ್ಲೆಯ ಹೋಬಳಿ ಕೇಂದ್ರಗಳಲ್ಲಿ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್‌ಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೇ ನೂತನ ಲಿಕ್ಕರ್ ಶಾಪ್ ತೆರೆಯಲು ಸರ್ಕಾರ ಅನುಮೋದನೆ ನೀಡುವುದೇ;

ಉ) ಹೊಸದಾಗಿ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್‌ಗಳನ್ನು ತೆರೆಯಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;

ನಿರುದ್ಯೋಗಿ ಯುವಕರಿಗೆ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್ ತೆರೆಯಲು ಅನುಮತಿ ನೀಡುವ ಸಂಬಂಧ ಸರ್ಕಾರ ಕ್ರಮ ಕೈಗೊಳ್ಳುವುದೇ (ಸಂಪೂರ್ಣ ವಿವರ ನೀಡುವುದು)?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೋಳಿ (ಅಬಕಾರಿ ಸಚಿವರು)

ಅ) ರಾಜ್ಯದಲ್ಲಿ 401 ಎಂಎಸ್ಐಎಲ್ ಮದ್ಯದಂಗಡಿಗಳಿಗೆ (ಸಿಎಲ್–11ಸಿ) ಪೂರ್ವಾನುಮತಿ ನೀಡಲಾಗಿರುತ್ತದೆ.

(ವಿವರ ಅನುಬಂಧದಲ್ಲಿ ಲಗತ್ತಿಸಿದೆ)

ಲಿಕ್ಕರ್ ಶಾಪ್ ತೆರೆಯಲು ಸರ್ಕಾರ ಯಾವುದೇ ಸೌಲಭ್ಯಗಳನ್ನು ನೀಡಿರುವುದಿಲ್ಲ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ರಾಯಚೂರು ಜಿಲ್ಲೆಯಲ್ಲಿ ಒಟ್ಟು 12 ಎಂಎಸ್ಐಎಲ್ ಮದ್ಯದಂಗಡಿಗಳು (ಸಿಎಲ್–11ಸಿ) ಕಾರ್ಯನಿರ್ವಹಿಸುತ್ತಿವೆ. ಎಂಎಸ್ಐಎಲ್ ಸಂಸ್ಥೆಯು ಪ್ರತಿ ಶಾಪ್‌ನಿಂದ ರೂ.337.19 ಲಕ್ಷ ವಾರ್ಷಿಕ ವಹಿವಾಟು ನಡೆಸಿ ರೂ.30.65ಲಕ್ಷಗಳಷ್ಟು ಆದಾಯ ಗಳಿಸಲಾಗುತ್ತಿದ್ದು, ನಿವ್ವಳ ಲಾಭ ರೂ.6.47 ಲಕ್ಷಗಳಾಗಿರುತ್ತದೆ.

ಈ) ಎಂಎಸ್ಐಎಲ್ ಸಂಸ್ಥೆಗೆ ಪ್ರತಿ ತಾಲ್ಲೂಕಿಗೆ ನಗರಕ್ಕೆ 1 ಮತ್ತು ಗ್ರಾಮಾಂತರ ಪ್ರದೇಶಕ್ಕೆ 1 ಹಾಗೂ ಜಿಲ್ಲಾ ಕೇಂದ್ರ ಸ್ಥಳಕ್ಕೆ 2 ರಂತೆ ಸಿಎಲ್–11ಸಿ ಸನ್ನದುಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಮೇಲೆ "ಇ" ನಲ್ಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಹೊಸ ಎಂ.ಎಸ್.ಐ.ಎಲ್ ಲಿಕ್ಕರ್ ಶಾಪ್‌ಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಸಿಎಲ್–11ಸಿ ಸನ್ನದುಗಳನ್ನು ಸರ್ಕಾರಿ ಸ್ವಾಮ್ಯದ ಎಂಎಸ್ಐಎಲ್ ಸಂಸ್ಥೆಗೆ ಮಾತ್ರ ನೀಡಲಾಗುವುದು. ಖಾಸಗಿ ವ್ಯಕ್ತಿಗಳಿಗೆ ಎಂಎಸ್ಐಎಲ್ ಸನ್ನದು ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.